


# ‘ಕರ್ಮ ಮಾಡಲು ನಿನಗೆ ಅಧಿಕಾರ’

**ಮಾತಾ ತ್ಯಾಗಮಯೀ**

ಭಗವದ್ಗೀತೆಯ ಪ್ರಧಾನ ತತ್ತ್ವವೇ ನಿಷ್ಕಾಮಕರ್ಮ. ಮಾನವಜೀವನದಲ್ಲಿ ಅನಿವಾರ್ಯವಾಗಿ ಎಲ್ಲರೂ ಹಾದುಹೋಗಬೇಕಾದ ಮಾರ್ಗವೇ ಕರ್ಮ - ಇದನ್ನು ಯೋಗವಾಗಿ ಮಾರ್ಪಡಿಸಿದಾಗಲೇ ಕರ್ಮದಿಂದ ನಮಗೆ ಬಿಡುಗಡೆ. ಇದನ್ನು ನಾವು ಅರಿತು ಜೀವನದಲ್ಲಿ ಅಳವಡಿಸಿಕೊಂಡರೆ ಅದೇ ಕರ್ಮವು ನಮಗೆ ವರವಾಗಿ ಮಾರ್ಪಡುವುದು. ಈ ತತ್ತ್ವವನ್ನು ವಿವಿಧ ಆಯಾಮಗಳಿಂದ ವಿವರಿಸಿರುವ ಲೇಖಕಿ, ಚಳ್ಳಕೆರೆ ಶ್ರೀಶಾರದಾ ಆಶ್ರಮದ ಮುಖ್ಯಸ್ಥರು. ಅನೇಕ ಗ್ರಂಥಗಳ ರಚನೆ ಮಾಡಿರುವ ಅವರು ಉತ್ತಮ ವಾಗ್ಮಿ ಹಾಗೂ ಅನುವಾದಕಿ.

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।**
**ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಸ್ತ್ವಕರ್ಮಣಿ**

*(ಗೀತಾ, ೨.೪೭)*

‘ಕರ್ಮ ಮಾಡಲು ಮಾತ್ರ ನಿನಗೆ ಅಧಿಕಾರ. ಅದರ ಫಲದಲ್ಲಿ ಅಲ್ಲ. ನಿನ್ನ ಕರ್ಮ ಫಲದಾಸೆಯಿಂದ ಕೂಡಿರುವುದು ಬೇಡ. ಹಾಗೆಂದು ಕರ್ಮ ಮಾಡುವುದು ಬೇಡ ಎಂದೂ ಭಾವಿಸದಿರು.’

ಬಹಳ ಪ್ರಸಿದ್ಧವಾದ ಶ್ಲೋಕವಿದು. ಗೀತೆಯ ಹೃದಯ ಅನಾಸಕ್ತಿ. ಅನಾಸಕ್ತಿಯನ್ನು ಕುರಿತು ಹೇಳುವ ಸೂತ್ರಪ್ರಾಯವಾದ ಶ್ಲೋಕವಿದು. ಈ ಶ್ಲೋಕದಲ್ಲಿ ನಾಲ್ಕು ಮಾತುಗಳಿವೆ.

೧) ಕರ್ಮ ಮಾಡಲು ನಿನಗೆ ಅಧಿಕಾರ.

೨) ಅದರ ಫಲದಲ್ಲಿ ಕದಾಚನ-ಎಂದಿಗೂ ಅಧಿಕಾರವಿಲ್ಲ.

೩) ಫಲವನ್ನು ಗಮನದಲ್ಲಿಟ್ಟು ಕೆಲಸ ಮಾಡಬೇಡ.

೪) ಹಾಗೆಂದು ಕರ್ಮ ಮಾಡದೆ ಇರುವುದರಲ್ಲಿ ಪ್ರೀತಿ ಬೇಡ.

ಮನುಷ್ಯ ಮಾಡುವ ಕರ್ಮ ಎರಡು ಬಗೆಯದು: ೧) ದಾನ ಮಾಡುವುದು, ಅನ್ನ ಛತ್ರ ತೆರೆಯುವುದು ಇತ್ಯಾದಿ ಪರೋಪಕಾರ ಕಾರ್ಯಗಳು. ೨) ವರ್ಣಾಶ್ರಮ ಧರ್ಮದ ಪ್ರಕಾರ ಶಾಸ್ತ್ರವಿಹಿತ ಕರ್ತವ್ಯಕರ್ಮಗಳನ್ನು ಪಾಲಿಸುವುದು. ಇವೆರಡನ್ನೂ ನಿಷ್ಕಾಮ ಭಾವನೆಯಿಂದ ಮಾಡಿದಾಗ ಸಮತ್ವ ರೂಪದ ಧರ್ಮ ನೆಲೆಗೊಳ್ಳುತ್ತದೆ.

ಮನುಷ್ಯ ಜನ್ಮದಲ್ಲಿ ಮಾತ್ರ ಒಂದೆಡೆ ಅವನು ಹಳೆಯ ಕರ್ಮಗಳ ಫಲ ಅನುಭವಿಸುತ್ತಾನೆ. ಅದನ್ನು ಬದಲಾಯಿಸಲು ಅವನಿಗೆ ಸ್ವಾತಂತ್ರ್ಯವಿಲ್ಲ. ಇನ್ನೊಂದೆಡೆ ವಿವೇಕದಿಂದ ಕೂಡಿ

ಹೊಸ ಕರ್ಮಗಳನ್ನು ಮಾಡುವ ಸ್ವಾತಂತ್ರ್ಯ ಅವನಿಗಿದೆ. ಈ ಹೊಸ ಕರ್ಮಗಳಿಂದ ಅವನು ಉದ್ಧಾರವಾಗಬಲ್ಲ, ತನ್ನ ಭವಿಷ್ಯವನ್ನು ನಿರ್ಮಾಣ ಮಾಡಬಲ್ಲ. ಈ ಉದ್ಧಾರಕರ್ಮಗಳನ್ನು ಮಾಡುವ ಸ್ವಾತಂತ್ರ್ಯ, ಶಕ್ತಿ, ವಿವೇಕಪ್ರಜ್ಞೆ ಪ್ರಾಣಿಪಕ್ಷಿಯೋನಿಗಳಿಗೆ, ದೇವಯೋನಿಗಳಿಗೆ ಇಲ್ಲ. ಪ್ರಾಣಿಪಕ್ಷಿ ಗಿಡಮರಗಳದ್ದು ಕೇವಲ ಭೋಗಯೋನಿ, ಅವು ಹೊಸ ಕರ್ಮಗಳನ್ನು ಮಾಡಲಾರವು. ದೇವತೆಗಳದ್ದೂ ಪುಣ್ಯಫಲ ಭೋಗಯೋನಿಗಳು. ಅವರೂ ಹೊಸ ಕರ್ಮ ಮಾಡಲಾರರು. ಮನುಷ್ಯ ಮಾತ್ರ ಕರ್ಮ ಮಾಡಬಲ್ಲ. ಅದಕ್ಕಾಗಿ ಅವನು ಕರ್ಮ ಮಾಡುವಾಗ ಶಾಸ್ತ್ರವಾಕ್ಯಗಳು, ಸಂತಮಹಾಪುರುಷರ ವಾಣಿಗಳು, ವಿಧಿ ನಿಷೇಧಗಳು, ರಾಜ್ಯಶಾಸನಗಳು ಮಾರ್ಗದರ್ಶನ ಮಾಡುತ್ತವೆ. ಹೀಗೆ ಇವನು ಹಿಂದಿನ ಕರ್ಮದ ಫಲವಾಗಿ ಬಂದ ಅನುಕೂಲ ಪ್ರತಿಕೂಲ ಪರಿಸ್ಥಿತಿಗಳಲ್ಲಿ ನಿರ್ಲಿಪ್ತನಾಗಿರುವುದರ ಮೂಲಕ ಹಾಗೂ ಹೊಸ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಮಾಡುವ ಮೂಲಕ ಉದ್ಧಾರವಾಗಬಲ್ಲ.

ಕರ್ಮ ಮಾಡಬೇಕು. ಫಲಾಪೇಕ್ಷೆಯಿಂದ ಕರ್ಮ ಮಾಡಿದರೆ ಬಂಧನದಲ್ಲಿ ಸಿಕ್ಕಿಕೊಳ್ಳುತ್ತೇವೆ. ರಜೋಗುಣಕ್ಕೆ ವಶರಾಗುತ್ತೇವೆ. ಹಾಗೆಂದು ಕರ್ಮ ಮಾಡದೆ ಇದ್ದರೆ ಆಲಸ್ಯ ಪ್ರಮಾದಕ್ಕೆ ಒಳಗಾಗುತ್ತೇವೆ. ಹೀಗೆ ಎರಡೂ ಸಂದರ್ಭಗಳಲ್ಲಿ ಮತ್ತೆ ಮತ್ತೆ ಜನನ ಮರಣ ಚಕ್ರಕ್ಕೆ ಬದ್ಧರಾಗುತ್ತೇವೆ. ಆದ್ದರಿಂದ ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡಬೇಕು. ಫಲದ ಆಸೆಯಿಂದ ಕೆಲಸ ಮಾಡಿ, ಫಲದ ಕಡೆಗೆ ಅಧಿಕ ಗಮನ ಕೊಟ್ಟಿದ್ದರಿಂದ ಈ ಕಡೆ ಕೆಲಸವೂ ಕೆಟ್ಟು, ಈ ಕಡೆ ಫಲವೂ ಬರದೆ ಶೋಕಾನ್ವಿತರಾಗುವ ಬದಲು ಫಲಾಪೇಕ್ಷೆಯಿಲ್ಲದೆ ಕೆಲಸದ ಕಡೆಗೆ ಪೂರ್ಣ ಗಮನ ಕೊಡು; ಆಗ ಉತ್ತಮ ಫಲ ಲಭಿಸುತ್ತದೆ. ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡು ಎಂದು ಕೃಷ್ಣ ಹೇಳಿದ. ಫಲ ದೊರೆಯುವುದಿಲ್ಲ ಎಂದು ಹೇಳಲಿಲ್ಲ. ಫಲಾಪೇಕ್ಷೆಯಿಲ್ಲದೆ ನಾವು ಬೀಜ ಬಿತ್ತನೆ ಮಾಡಿದಾಗ ಬೆಳೆ ಬರುವುದಿಲ್ಲವೇನು? ಬೆಳೆ ಬಂದೇ ಬರುತ್ತದೆ. ಬೆಳೆಯನ್ನು ತ್ಯಾಗ ಮಾಡಬೇಕೇನು? ಸ್ವೀಕರಿಸಬಾರದೇನು? ಹಾಗಲ್ಲ, ಕರ್ಮಫಲ ತ್ಯಾಗ ಎಂದು ಹೇಳಿದಾಗ ಫಲದ ಕಾಮನೆ, ಫಲದ ವಾಸನೆ, ತೃಷೆಯನ್ನು ಬಿಡಬೇಕು, ನಾನು ಮಾಡಿದೆ ನನಗಾಗಿ ಮಾಡಿದೆ ಎಂಬ ಕರ್ತೃತ್ವಭಾವನೆಯನ್ನು ಬಿಡಬೇಕು ಎಂದರ್ಥ. ಫಲವನ್ನು ಅನುಭವಿಸೋಣ. ಆದರೆ ನಿರ್ಲಿಪ್ತ ಭಾವನೆಯಿಂದ, ಫಲದ ಕಡೆ ಗಮನ ಕೊಟ್ಟಷ್ಟು ಕೆಲಸದ ಕಡೆ ಗಮನ ಕಡಿಮೆಯಾಯಿತು. ಆಗ ಚಿಂತೆ, ಉದ್ವಿಗ್ನತೆ ಕಟ್ಟಿಟ್ಟ ಬುತ್ತಿ. ಅದ್ದರಿಂದ ಫಲಾಪೇಕ್ಷೆ ಬಿಡು.

ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡುವುದು ಹೇಗೆ ಎಂಬುದು ಪ್ರಶ್ನೆಯೇ ಅಲ್ಲ. ನಾವು ಒಂದು ಮಗುವನ್ನು ಎತ್ತಿ ಮುದ್ದಿಸುತ್ತೇವೆ. ಆ ಮಗು ನಾಳೆ ನಮ್ಮನ್ನು ಪ್ರೀತಿಸಲಿ ಬಿಡಲಿ, ಅದರ ತಾಯ್ತಂದೆಯರು ನಮಗೆ ಬಿರುದು ಕೊಡಲಿ ಎಂದೆಲ್ಲ ಯಾವ ಅಪೇಕ್ಷೆಯೂ ಇಲ್ಲದೆ ಮಗುವನ್ನು ಪ್ರೀತಿಸಿದ್ದಲ್ಲವೆ? ಅದರಿಂದ ನಮಗೆ ಎಂತಹ ಶುದ್ಧವಾದ ಆನಂದ ದೊರೆಯಿತು? ಹೀಗೆಯೇ ಪ್ರತಿಯೊಂದು ಕೆಲಸದಲ್ಲಿ ಫಲಾಪೇಕ್ಷೆಯನ್ನು ಬಿಟ್ಟಾಗ ನಮಗೆ ಅತ್ಯುನ್ನತ ಶಾಂತಿ ಸಿಗುತ್ತದೆ.

ನಾವು ಏಕೆ ಫಲಾಪೇಕ್ಷೆಯಿಲ್ಲದೆ ದುಡಿಯಬೇಕು? ಏಕೆಂದರೆ

೧) ಒಂದು ಕೆಲಸ ಎಷ್ಟು ಅಮೂಲ್ಯವೆಂದರೆ ಅದಕ್ಕೆ ನಾವು ಯಾವ ಬೆಲೆಯನ್ನೂ ಕಟ್ಟಲಾಗದು. ಒಬ್ಬ ನೇಕಾರ ಒಂದು ವಸ್ತ್ರಕ್ಕೆ ೨೦೦ ರೂ ಬೆಲೆ ಹೇಳುತ್ತಾನೆ. ಅದನ್ನು ನೇಯಲು ಅವನು ಒಂದು ವಾರ ಬೆವರು ಸುರಿಸಿದ. ಅದಕ್ಕೆ ಬೆಲೆ ಕಟ್ಟಲಾಗುತ್ತದೆಯೇನು? ಒಬ್ಬ ವಿದ್ಯಾರ್ಥಿ ವರ್ಷವಿಡೀ ನಿಷ್ಠೆಯಿಂದ, ಶಿಸ್ತಿನಿಂದ ವಿದ್ಯಾರ್ಜನೆ ಮಾಡಿದ್ದಕ್ಕೆ ೭೦% ಅಥವಾ ೮೦% ಎಂದು ಬೆಲೆ ಕಟ್ಟಲಾಗುತ್ತದೇನು?

೨) ಕರ್ಮದಲ್ಲಿ ಸಿಗುವ ಆನಂದ, ಸಂತುಷ್ಟಿ, ತನ್ನ ಪ್ರತಿಭೆಯ ಅಭಿವ್ಯಕ್ತಿಗೆ, ಬೆಳವಣಿಗೆಗೆ ಅಲ್ಲಿ ದೊರೆತ ಪೋಷಣೆ ಅದರ ಫಲದಲ್ಲಿ ದೊರೆಯುವುದಿಲ್ಲ.

೩) ಮಕ್ಕಳು ಒಂದು ಕೆಲಸ ಹೇಳಿದರೆ ಮಾಡುವುದಿಲ್ಲ. ಆದರೆ ಚಾಕಲೇಟು ಕೊಡುತ್ತೇನೆ ಎಂದರೆ ಕೂಡಲೇ ಮಾಡುತ್ತವೆ. ಮಕ್ಕಳಿಗೆ ನಾವು ಯಾವಾಗಲೂ ಅವರ ಕಡೆಗೇ ಗಮನ ಕೊಡಬೇಕೆಂದು ಬಯಕೆ. ನಾವು ಅವರ ಕಡೆ ಗಮನ ಕೊಡದಿದ್ದರೆ ಅವು ಗಲಾಟೆ ಮಾಡುತ್ತವೆ. ನಾವೂ ಜೀವನವಿಡೀ ಪ್ರತಿ ಫಲಾಪೇಕ್ಷೆಯಿಂದ ಕೂಡಿ ಮಕ್ಕಳಂತೆ ಇರಬೇಕೆ? ಅಥವಾ ಪ್ರಬುದ್ಧ ವ್ಯಕ್ತಿಗಳಾಗಬೇಕೆ?

೪) ಒಂದು ಕೆಲಸ ಯಶಸ್ವಿಯಾಗಲು ನಾವೊಬ್ಬರೇ ಕಾರಣರಲ್ಲ. ಅದರಲ್ಲಿ ಹಲವು ವ್ಯಕ್ತಿಗಳ ಸಹಾಯ, ಸಹಕಾರ, ಶುಭಾಶಯಗಳು ಸೇರಿರುತ್ತವೆ, ಭಗವಂತನ ಕೃಪೆ, ಅನುಕೂಲ ವಾತಾವರಣದ ಸಹಾಯವೂ ಇರುತ್ತದೆ. ಆದ್ದರಿಂದ ಫಲಕ್ಕೆ ನಾವೊಬ್ಬರೇ ಹೇಗೆ ಜವಾಬ್ದಾರರಾಗುತ್ತೇವೆ? ಫಲಾಪೇಕ್ಷೆಯಿಲ್ಲದೆ ಕರ್ಮ ಮಾಡು ಎಂದರೆ ಫಲ ಬಂದಾಗ ನೀನೊಬ್ಬನೇ ಗರ್ವ ಪಡಬೇಡ, ಹಂಚಿ ತಿನ್ನು, ಹಂಚಿ ಆನಂದಪಡು–**ತೇನ ತ್ಯಕ್ತೇನ ಭುಂಜೀಥಾಃ** –ತ್ಯಾಗದಿಂದ ಅನುಭವಿಸು, ಸ್ವಾರ್ಥವನ್ನು ಬಿಡು, ಅಹಂಕಾರವನ್ನು ಬಿಡು ಎಂದರ್ಥ. ಅದಕ್ಕಾಗಿ ಹಿರಿಯರು ಹೊಲದಲ್ಲಿ ಬೆಳೆ ಬಂದಾಗ ಮೊದಲ ಬೆಳೆಯನ್ನು ಭಗವಂತನಿಗೆ ಅರ್ಪಿಸುತ್ತಿದ್ದರು, ಮೊದಲ ಬೆಳೆಯ ಒಂದು ಭಾಗವನ್ನು ಯಾರಿಗಾದರೂ ದಾನ ಕೊಡುತ್ತಿದ್ದರು. ವ್ಯಕ್ತಿ ತನ್ನ ಸಂಪಾದನೆಯ ಒಂದು ಭಾಗವನ್ನು ಯಾರಿಗಾದರೂ ದಾನ ಮಾಡಬೇಕು ಎಂದು ಮಹಾಭಾರತದಲ್ಲೂ ಇತರ ಧರ್ಮಗ್ರಂಥಗಳಲ್ಲೂ ಹೇಳಲಾಗಿದೆ. ಇಸ್ಲಾಂ ಧರ್ಮದಲ್ಲೂ ದಾನವನ್ನು ವಿಶೇಷವಾಗಿ ಒತ್ತಿಹೇಳಲಾಗಿದೆ.

ನಮ್ಮ ಭಾರತೀಯ ಸಮಾಜವು result oriented society ಅಲ್ಲ, work oriented society. Result oriented society ಆದ ಪಾಶ್ಚಾತ್ಯ ರಾಷ್ಟ್ರಗಳು ಎಂತೆಂತಹ

ಮಾನಸಿಕ ತುಮುಲಗಳನ್ನು ಎದುರಿಸುತ್ತಿವೆ ಎಂಬುದನ್ನು ನಾವು ಇತ್ತೀಚಿನ ದಿನಗಳಲ್ಲಿ ನೋಡುತ್ತಿದ್ದೇವೆ. ನಾವು ಫಲಾಪೇಕ್ಷೆಯಿಲ್ಲದೆ ಕರ್ಮ ಮಾಡುತ್ತಿದ್ದೇವೆ ಎನ್ನಲು ಸಾಕ್ಷಿ ಏನು? ಫಲಾಪೇಕ್ಷೆಯಿಲ್ಲದೆ ದುಡಿದಾಗ ನಾವು ಮಾಡಿದ ಕರ್ಮದಿಂದ ದುಃಖ ಬರುವುದಿಲ್ಲ. ದುಃಖಕ್ಕೆ ಕಾರಣ ಕರ್ಮವಲ್ಲ, ಫಲಾಪೇಕ್ಷೆ. ನಾವು ಮಾಡಿದ ಕೆಲಸಕ್ಕೆ ಗೊಣಗುಟ್ಟುತ್ತೇವೆಯೇನು? ಗೊಣಗುಟ್ಟಿದರೆ ಅಲ್ಲಿ ಫಲಾಪೇಕ್ಷೆ ಸೇರಿದೆ ಎಂದರ್ಥ. ಕರ್ಮದಲ್ಲಿ ಫಲಾಪೇಕ್ಷೆ ರಹಿತನಾಗಲು ವಿವೇಕವೂ ಇರಬೇಕು, ಸೇವಾಭಾವವೂ ಇರಬೇಕು. ವಿವೇಕವೆಂದರೇನು? ಇದು 'ನನ್ನ ಅಂತಃಕರಣ ಹಾಗೂ ಇಂದ್ರಿಯಗಳಿಂದ ನಡೆದ ಕಾರ್ಯ. ಆತ್ಮನಾದ ನನಗೂ ಇದಕ್ಕೂ (ಕಾರ್ಯಕ್ಕೂ) ಏನಾದರೂ ಸಂಬಂಧವಿದೆಯೆ?' ಫಲಾಪೇಕ್ಷೆಯನ್ನು ಬಿಡು. ಸೇವಾಭಾವ ಎಂದರೇನು? ಈಗ ನನಗೆ ದೊರೆತ ಪ್ರಾರಬ್ಧವನ್ನು ಸರ್ವಹಿತಕ್ಕಾಗಿ, ಇತರರ ಸೇವೆಗಾಗಿ ಬಳಸುತ್ತೇನೆಯೇ ಹೊರತು, ನನ್ನ ಸ್ವಾರ್ಥಕ್ಕಾಗಿ ಪ್ರತಿಫಲವನ್ನು ಬಯಸಿ ಹೊಸ ಪ್ರಾರಬ್ಧವನ್ನು ಸಿದ್ಧ ಮಾಡುವುದಿಲ್ಲ.

ಕರ್ಮ ಮಾಡಲು ಆಸಕ್ತಿ, ರಾಗ ಇಟ್ಟುಕೊಳ್ಳಬಾರದು. ಅದು ರಜೋಗುಣವಾಯಿತು. ಕರ್ಮ ಮಾಡುವುದಿಲ್ಲ ಎಂಬ ಆಸಕ್ತಿ, ರಾಗವನ್ನೂ ತಾಳಬಾರದು. ಅದು ತಮೋಗುಣವಾಗುತ್ತದೆ. ರಾಗವೇ ಪ್ರತಿಫಲಾಪೇಕ್ಷೆಯಿಲ್ಲದೆ ಕರ್ಮ ಮಾಡಲು ಇರುವ ಶತ್ರು. ನಾವು ಕೆಲಸ ಮಾಡಿದ್ದರಿಂದ ಇನ್ನೊಬ್ಬರಿಗೆ ಸಹಾಯವಾಯಿತು ಎಂದು ಭಾವಿಸುವುದು ಪ್ರತಿಫಲಾಪೇಕ್ಷೆ. ಏಕೆಂದರೆ ಆಗ ನಾವು ಅವರಿಂದ ಕೃತಜ್ಞತೆಯನ್ನು ಬಯಸುತ್ತಿದ್ದೇವೆ. ನಮ್ಮಲ್ಲಿ ಕರ್ತೃತ್ವ ಬುದ್ಧಿ ಇದೆ ಎಂದರ್ಥ.

ಕರ್ಮವನ್ನು ಪ್ರತಿಫಲಾಪೇಕ್ಷೆಯಿಲ್ಲದೆ ಮಾಡುವುದು ಎಂದರೇನರ್ಥ? ಕರ್ಮವನ್ನು ಯೋಗಬುದ್ಧಿಯಿಂದ ಮಾಡು ಎಂದರ್ಥ.

**ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।**
**ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥**

*(ಗೀತೆ, ೨-೪೮)*

೧) ಯೋಗ ಬುದ್ಧಿಯಿಂದ ಕರ್ಮವನ್ನು ಮಾಡು ೨) ಸಂಗವನ್ನು ತ್ಯಜಿಸಿ ೩) ಸಿದ್ಧಿ-ಅಸಿದ್ಧಿಗಳಲ್ಲಿ ಸಮಬುದ್ಧಿಯಿಂದ ಕರ್ಮ ಮಾಡು. ೪) ಸಮತ್ವವನ್ನೇ ಯೋಗ ಎಂದು ಕರೆಯಲಾಗಿದೆ.

ಸಂಗವನ್ನು ತ್ಯಜಿಸುವುದೆಂದರೇನು? ಆಸಕ್ತಿಯನ್ನು ಬಿಡುವುದು. ಯಾವುದೇ ಕರ್ಮ ಫಲದಲ್ಲಿ, ಯಾವುದೇ ದೇಶ, ಕಾಲ, ಘಟನೆ, ಪರಿಸ್ಥಿತಿ, ಇಂದ್ರಿಯ, ಮನಸ್ಸುಗಳಲ್ಲಿ ಅಥವಾ ಯಾವುದೇ ವಸ್ತುವಿನಲ್ಲೂ ಆಸಕ್ತಿಯನ್ನು ಬಿಟ್ಟು ನಿರ್ಲಿಪ್ತತೆಯಿಂದ ಕರ್ಮ ಮಾಡುವುದು. ಶ್ರೀರಾಮಕೃಷ್ಣರು ನುಡಿದಂತೆ ಶ್ರೀಮಂತರ ಮನೆಯ ದಾಸಿಯಂತೆ ಕರ್ಮ ಮಾಡುವುದು.

ಕರ್ಮಯೋಗ ಎಂದು ಹೇಳಿದಾಗ ಅಲ್ಲಿ ಕರ್ಮಕ್ಕಿಂತ ಯೋಗದ ಪಾತ್ರ ಎಂದರೆ ಅನಾಸಕ್ತಿಯ ಪಾತ್ರ ಅಧಿಕವಿದೆ. ಆದ್ದರಿಂದ ಕರ್ಮಯೋಗವನ್ನು ಯೋಗ ಎಂದೂ, ಬುದ್ಧಿಯೋಗ ಎಂದೂ ಕರೆಯಲಾಗಿದೆ.

'ಯೋಗಸ್ಥಃ ಕುರು ಕರ್ಮಾಣಿ' ಎಂದರೆ ಯೋಗಬುದ್ಧಿಯಿಂದ ಕರ್ಮವನ್ನು ಮಾಡು ಪ್ರತಿಯೊಬ್ಬರೂ ಹೊರಗಡೆಯಿಂದ ಕೆಲಸ ಮಾಡುವ ರೀತಿ ಒಂದೇ ಆದರೂ ಕರ್ಮ ಮಾಡುವಾಗ ಮನಸ್ಸಿನ ಸ್ತರ ಮತ್ತು ಭಾವ ಬೇರೆ ಬೇರೆಯದಾಗಿರುತ್ತದೆ. ಒಂದು ದೇವಸ್ಥಾನ ಕಟ್ಟುವ ಕಾರ್ಯದಲ್ಲಿ ಅನೇಕ ಕೂಲಿಗಳು ಕಲ್ಲು ಹೊರುತ್ತಿದ್ದರು. ಒಬ್ಬ ಕೂಲಿ ''ಅಯ್ಯೋ, ನನ್ನ ಹಣೆಬರಹ, ಕಲ್ಲು ಹೊರುತ್ತಿದ್ದೇನೆ'' ಎಂದನು. ಇನ್ನೊಬ್ಬ ಕೂಲಿ, ''ನಾನು ನನ್ನ ಕರ್ತವ್ಯವನ್ನು ಪಾಲಿಸುತ್ತಿದ್ದೇನೆ. ಅದರಲ್ಲಿ ನನಗೆ ಆನಂದ'' ಎಂದನು. ಇನ್ನೊಬ್ಬ ಕೂಲಿ, ''ದೇವಸ್ಥಾನ ನಿರ್ಮಾಣದ ಪವಿತ್ರ ಕಾರ್ಯದಲ್ಲಿ ನನ್ನ ಅಳಿಲುಸೇವೆಯನ್ನು ಸಲ್ಲಿಸುತ್ತಿದ್ದೇನೆ. ಈ ಅವಕಾಶ ದೊರೆತಿರುವುದೇ ನನ್ನ ಭಾಗ್ಯ'' ಎಂದನು. ಹೀಗೆ ಮೂವರು ಮಾಡುವ ಕೆಲಸ ಒಂದೇ ಆದರೂ ಅವರ ಭಿನ್ನ ಭಿನ್ನ ಮನಸ್ಥಿತಿಗೆ ತಕ್ಕಂತೆ ಕಾರ್ಯದ ಗುಣಮಟ್ಟವೂ ಭಿನ್ನವಾಗಿರುತ್ತದೆ. ಒಬ್ಬ ಗೃಹಿಣಿ ಕಸ ಗುಡಿಸುವ ರೀತಿಯನ್ನು ನೋಡಿಯೇ ಅವಳು ಯೋಗಿಯೋ, ಅವಳ ಮನಸ್ಸು ಶಿಸ್ತುಬದ್ಧವಾಗಿದೆಯೋ ಇಲ್ಲವೋ ಎಂಬುದನ್ನು ಹೇಳಬಹುದು.

ಒಬ್ಬ ಕೈದಿಯೂ ಒಬ್ಬ ಯೋಗಿಯೂ ಒಂದೇ ಕೆಲಸವನ್ನು ಮಾಡಬಹುದು. ಆದರೆ ಕೈದಿ ಮಾಡುವ ಕೆಲಸದ ಸ್ತರವೇ ಬೇರೆ, ಯೋಗಿ ಮಾಡುವ ಕೆಲಸದ ಸ್ತರವೇ ಬೇರೆ.

ನಾವು ಮಾಡುವ ಕೆಲಸವನ್ನು ಪ್ರೀತಿಯಿಂದ ಮಾಡಬೇಕು, ಶಿಸ್ತಿನಿಂದ ಮಾಡಬೇಕು. ಉನ್ನತ ಪ್ರಜ್ಞೆಯಿಂದ ಮಾಡಬೇಕು (ನಾನು ದೇಶದ ಪ್ರಜೆಯಾಗಿ ಸೇವೆಯನ್ನು ಮಾಡುತ್ತಿದ್ದೇನೆ, ನಾನು ಭಗವಂತನ ಪೂಜೆಯೆಂದು ಈ ಕೆಲಸವನ್ನು ಮಾಡುತ್ತಿದ್ದೇನೆ.) ಜೊತೆಯಲ್ಲಿ ಸಂಗಂ ತ್ಯಕ್ತ್ವಾ-ಅನಾಸಕ್ತಿಯಿಂದ, ಸಂಗವನ್ನು ತ್ಯಜಿಸಿ ಮಾಡಬೇಕು. ಇದು ಯೋಗ. ಒಬ್ಬ ಗೃಹಿಣಿ, ಶಿಕ್ಷಕ, ನೌಕರ, ಅಧಿಕಾರಿ-ಪ್ರತಿಯೊಬ್ಬರೂ ಯಾವ ಕೆಲಸಗಳಲ್ಲಿ ತೊಡಗಿದ್ದರೂ, ಯಾವ ಸ್ಥಾನಮಾನದಲ್ಲಿದ್ದರೂ ಯೋಗಿಗಳಾಗಬಹುದು, ಯೋಗಿಗಳಾಗಬೇಕು. ನಮಗೆ ಹಿಮಾಲಯದಲ್ಲಷ್ಟೇ ಯೋಗಿಗಳು ಇದ್ದರೆ ಸಾಕಾಗುವುದಿಲ್ಲ, ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಯೋಗಿಯಾಗಬೇಕು.[೧]

ಶ್ರೀಕೃಷ್ಣನು ಸಿದ್ಧಿ ಅಸಿದ್ಧಿಯಲ್ಲಿ ಸಮವಾಗಿರಬೇಕು ಎನ್ನುತ್ತಾನೆ. ಆಸಕ್ತಿಯನ್ನು ಬಿಟ್ಟಾಗ ಮಾತ್ರ ಇದು ಸಾಧ್ಯವಾಗುತ್ತದೆ. ಕರ್ಮ ಪೂರ್ಣವಾಗಲಿ, ಬಿಡಲಿ, ಒಳ್ಳೆಯ ಫಲ ಬರಲಿ, ಕೆಟ್ಟ

೧ *Universal Message of Bhagavadgita, by Swami Ranganathanandaji. P.186*

ಫಲ ಬರಲಿ, ಆ ಕೆಲಸದಿಂದ ನಮಗೆ ಗೌರವ ಬರಲಿ, ಅಪಮಾನ ಬರಲಿ, ಹೊಗಳಿಕೆ ಬರಲಿ, ತೆಗಳಿಕೆ ಬರಲಿ, ಅಂತಃಕರಣ ಶುದ್ಧಿ ಯಾಗಲಿ, ಆಗದಿರಲಿ, ಅಂತಃಕರಣ ಶುದ್ಧಿಯ ಫಲವಾದ ಜ್ಞಾನ ಲಭಿಸಲಿ, ಲಭಿಸಿದಿರಲಿ — ಈ ಎಲ್ಲ ಸಂದರ್ಭಗಳಲ್ಲಿ ಸಮ ವಾಗಿ ಇರುವುದು.[೨] ಎಷ್ಟು ಕಠಿಣವಿದೆ! ಈ ಸಮತ್ವವೇ ಯೋಗ. ಪರಮಾತ್ಮನ ಸ್ವರೂಪವೇ ಸಮತ್ವ — 'ನಿರ್ದೋಷಂ ಹಿ ಸಮಂ ಬ್ರಹ್ಮ'-ಬ್ರಹ್ಮ ನಿರ್ದೋಷವಾದುದು, ಸಮವಾದುದು. ಪರ ಮಾತ್ಮನೊಂದಿಗೆ ನಮ್ಮನ್ನು ಯಾವುದು ಜೋಡಿಸುತ್ತದೆಯೋ ಅದು ಯೋಗ. ಆದ್ದರಿಂದ ಸಮತ್ವಂ ಯೋಗ — ಈ ಯೋಗ ಯಾವಾಗಲೂ ಸಾಧ್ಯವಾಗಬೇಕು, ನಿರಂತರ ಸಾಧ್ಯವಾಗಬೇಕು! ಎಷ್ಟು ಕಠಿಣವಿದೆ !

ಬುದ್ಧಿಯಲ್ಲಿ ಎರಡು ಪ್ರಕಾರ ೧) ಅವ್ಯವಸಾಯಾತ್ಮಿಕಾ ಬುದ್ಧಿ-ವ್ಯಕ್ತಿಯ ಬುದ್ಧಿ ಪ್ರಾಪಂಚಿಕ ಭೋಗ ಸುಖಗಳು, ಹಣ, ಆಸ್ತಿ ಪಾಸ್ತಿ, ಮಾನ ಸನ್ಮಾನ ಅಧಿಕಾರ-ಹೀಗೆ ಅನೇಕ ವಸ್ತು ಗಳನ್ನು ಪಡೆಯಲು ಹರಡಿ ಹಂಚಿ ಹೋಗಿದೆ. ಇವುಗಳಲ್ಲಿ ಒಂದೊಂದನ್ನು ಪಡೆಯಲಿಕ್ಕೂ ಬುದ್ಧಿ ಹಲವು ಉಪಾಯಗಳಲ್ಲಿ ಹಂಚಿ ಹೋಗಿದೆ. ಉದಾ: ಹಣ ಸಂಪಾದನೆಯನ್ನು ಎರಡು ಮೂರು ಉದ್ಯೋಗಗಳಿಂದ ಮಾಡುವುದು, ಹಣಸಂಪಾದನೆ ಗೆಂದು ಹೋಮ ಮಾಡುವುದು, ಜ್ಯೋತಿಷಿಯ ಮೊರೆಹೋಗು ವುದು ಇತ್ಯಾದಿ. ಇದು ಅವ್ಯವಸಾಯಾತ್ಮಿಕ ಬುದ್ಧಿ. ೨) ವ್ಯವ ಸಾಯಾತ್ಮಿಕ ಬುದ್ಧಿ-ಸಮತ್ವವನ್ನು ಪಡೆಯುವುದು, ಆತ್ಮಸಾಕ್ಷಾ ತ್ಕಾರ ಪಡೆಯುವುದು ಗುರಿಯಾದಾಗ ಅಂತಹ ಏಕಾಗ್ರಗೊಂಡ ಬುದ್ಧಿಯು ವ್ಯವಸಾಯಾತ್ಮಿಕಾ ಬುದ್ಧಿ - ಏಕವಾಗಿರುತ್ತದೆ. ಸಮ ತ್ವವೇ ಗುರಿ ಎಂದು ಮನಸ್ಸಿನಲ್ಲಿಟ್ಟುಕೊಂಡ ವ್ಯವಸಾಯಾತ್ಮಿಕಾ ಬುದ್ಧಿ ಜಯಾಪಜಯ, ಸುಖ-ದುಃಖ, ಲಾಭಾಲಾಭಗಳಲ್ಲಿ ಸಮವಾಗಿರಬೇಕು, ರಾಗದ್ವೇಷ ತಾಳಲು ಹೋಗಬಾರದು. ಇದು ಯೋಗ ಅಥವಾ ಬುದ್ಧಿಯೋಗ.

ಅಂತರಂಗದ ಸಮತ್ವವನ್ನು ಸಾಧಿಸಲಿಕ್ಕೆ ಎರಡು ಮಹತ್ವ ಪೂರ್ಣ ಗುಣಗಳನ್ನು ಕಲಿಯಲೇಬೆಕು. ಅವು ಶಮ, ದಮ-ಮನೋನಿಗ್ರಹ ಮತ್ತು ಇಂದ್ರಿಯನಿಗ್ರಹ.[೩] ಶಮ, ದಮ ಎಂದು ಹೇಳಿದಾಗ ಮನಸ್ಸು ಪ್ರತಿಬಾರಿ ಶಿಸ್ತಿನ ವಿರುದ್ಧ ದಂಗೆ ಎದ್ದಾಗ ಅದಕ್ಕೆ ''no, ಕೂಡದು, ಸಲ್ಲ'' ಎಂದು ಹೇಳಬೇಕು. ಪ್ರತಿ ಸಲ ಮನಸ್ಸು ಆಸೆ-ಫಲಾಪೇಕ್ಷೆಗೆ ವಶವಾದಾಗಲೂ ಅದಕ್ಕೆ ''no, ಕೂಡದು'' ಎಂದು ಗದರಿಸಬೇಕು. ಸಮತ್ವ ಇದ್ದಾಗ ಮಾತ್ರ ಯೋಗ ಸಾಧ್ಯ. ಆಗ ಮಾತ್ರ ಅತ್ಯುತ್ತಮ ಫಲ ಲಭಿಸು ತ್ತದೆ. best output : ಹೊಸದಾಗಿ ರೈಲನ್ನು ಕಂಡುಹಿಡಿದಾಗ ಅದು ಬಹಳ ಸದ್ದು ಮಾಡುತ್ತಿತ್ತು, ಬಹಳ ಅಲುಗಾಡುತ್ತಿತ್ತು. ಗಂಟೆಗೆ ೧೨ ಮೈಲು ದೂರ ಕ್ರಮಿಸುತ್ತಿತ್ತು. ಬರಬರುತ್ತ ಸಂಶೋಧನೆಗಳಾಗಿ ಇಂದು ಘಂಟೆಗೆ ೧೨೦ ಮೈಲಿ ವೇಗವಾಗಿ ಹೋಗುವ ರೈಲುಗಳು ಇವೆ-ಸದ್ದು ಅತಿ ಕಡಿಮೆ. ಅಲುಗಾಟ ಕಡಿಮೆ. ಆದರೆ ಅತಿವೇಗ. ಅದೇ ರೀತಿ ನಾವು ಹೆಚ್ಚು ಗಲಾಟೆ ಮಾಡುತ್ತಿದ್ದರೆ ಕಡಿಮೆ ಕೆಲಸ ಸಾಧ್ಯವಾಗುತ್ತದೆ. ಶಾಂತ, ಸ್ಥಿರ, ಏಕಾಗ್ರ ಮನಸ್ಸಿನ ವ್ಯಕ್ತಿ ಮಾತ್ರ ಪ್ರಚಂಡ ಲೋಕಹಿತ ಕಾರ್ಯ ಗಳನ್ನು ಮಾಡಬಲ್ಲ. ಉಳಿದವರೆಲ್ಲ ಕೆಲಸದ ಹೆಸರಲ್ಲಿ ಬರೀ ಗಲಾಟೆ ಮಾಡುತ್ತಿದ್ದಾರಷ್ಟೇ.

'ಬುದ್ಧೌ ಶರಣಂ ಅನ್ವಿಚ್ಛ ಕೃಪಣಾಃ ಫಲಹೇತುವಃ' -ಬುದ್ಧಿ ತತ್ತ್ವದಲ್ಲಿ ಶರಣು ಹೋಗು. ಫಲಾಪೇಕ್ಷೆಯುಳ್ಳವರು ದೀನರು, ಬುದ್ಧಿಯಲ್ಲಿ ಶರಣಾಗು ಎಂದರೆ ಸಮತ್ವದ ಸ್ಥಿತಿಯಲ್ಲಿ ನೆಲಸು ಎಂದರ್ಥ. ಫಲಾಪೇಕ್ಷೆಯುಳ್ಳವರು ದೀನರು, ಕೃಪಣರು ಏಕೆ? ಏಕೆಂದರೆ ಅವರಲ್ಲಿ ಫಲಾಪೇಕ್ಷೆಯಿಂದಾಗಿ ಸಮತ್ವ ಬರುವು ದಿಲ್ಲ. ಸಮತ್ವವಿಲ್ಲದ್ದರಿಂದ ಶರೀರದಲ್ಲಿ ಅಹಂಕಾರ ಮಮಕಾರ ಬಂದಿತು. ಅದರಿಂದ ಸಕಾಮಕರ್ಮ. ಸಕಾಮಕರ್ಮದಿಂದ ಜನ್ಮಮರಣ ಚಕ್ರ. ಎಂಥಾ ಶೋಚನಿಯ ಸ್ಥಿತಿ! ಕೃಪಣಾಃ! ಆದರೆ ಬುದ್ಧಿಯಲ್ಲಿ ಶರಣಾದವನು ಕೃತಕೃತ್ಯನಾಗುತ್ತಾನೆ, ಶಾಂತನಾಗು ತ್ತಾನೆ. ಬುದ್ಧಿಯಲ್ಲಿ ಶರಣಾಗಬೇಕಾದರೆ ಬುದ್ಧಿ ಸುಶಿಕ್ಷಿತವಾಗಿರ ಬೇಕು. ಎಂದರೆ develop your psychic energies- ಮನಶ್ಶಕ್ತಿಗಳನ್ನು ಸುಶಿಕ್ಷಿತಗೊಳಿಸಿಕೊಳ್ಳಿರಿ. Wildness, crudity - ಒರಟು ಬುದ್ಧಿಯನ್ನು ತೆಗೆದುಹಾಕಿ. ಸ್ವಾರ್ಥಬುದ್ಧಿ, ಸಣ್ಣ ಬುದ್ಧಿಯನ್ನು ತಿದ್ದಿ ತೀಡಿ ಸುಸಂಸ್ಕೃತವಾಗಿ ಬೆಳೆಸಬೇಕು. ಕಾಡು ಪ್ರಾಣಿಯನ್ನು ಬೋನಿನಲ್ಲಿ ಹಿಡಿದು ತಂದು, ಅದರ ಕಾಡುತನ ವನ್ನು, ಒರಟುತನವನ್ನು ತರಬೇತಿಯ ಮೂಲಕ ಪರಿವರ್ತಿಸಿ ಸರ್ಕಸ್ಸಿನಲ್ಲಿ ಅದನ್ನು ಉಪಯುಕ್ತ ಜೀವಿಯಾಗಿಸಿದಂತೆ, ನಮ್ಮ ಕಾಡು ಬುದ್ಧಿ wild intellect ನ್ನು, crude intellect ನ್ನು tamed intellect, refined intellect ಆಗಿ ಸಿದ್ಧಗೊಳಿಸ ಬೇಕು. ಒಂದು ಕಟ್ಟಡವನ್ನು ಕಟ್ಟಲು ಬುದ್ಧಿ ಬೇಕು, ಕ್ಷಿಪಣಿ ಯನ್ನು ಕಕ್ಷೆಗೆ ಹಾರಿಸಲು ಬುದ್ಧಿ ಬೇಕು. ಸಾವಿರಾರು ಜನರನ್ನು ನಾಶಪಡಿಸಲು ಬುದ್ಧಿ ಬೇಕು, ಆದರೆ ನಮಗೆ ಬೇಕಾಗಿರುವ ಬುದ್ಧಿ ಇದಲ್ಲ. ಬುದ್ಧನಲ್ಲಿದ್ದ, ಶಂಕರಾಚಾರ್ಯರಲ್ಲಿದ್ದ ಬುದ್ಧಿ - intellect illumined by spiritual culture.[೪] ಆಧ್ಯಾ ತ್ಮಿಕ ಪ್ರಜ್ಞೆಯಿಂದ ಅರಳಿದ ಬುದ್ಧಿ ನಮಗೆ ಬೇಕಾಗಿರುವುದು. ಉದಾಹರಣೆಗೆ ನಾವು, 'ನಾನು, ನನ್ನ ಸುಖ' ಎಂದು ಹೆಚ್ಚು ಯೋಚಿಸುತ್ತೇವೆಯೋ, 'ನಾನು ನಿಮಗಾಗಿ ಏನು ಮಾಡಲಿ?' ಎಂದು ಸರ್ವಹಿತವನ್ನು, ಯೋಚಿಸುತ್ತೇವೆಯೋ, ನಮಗೆ ಅಪ ಮಾನವಾದಾಗ ನಮ್ಮನ್ನು ನಾವು ತಿದ್ದಿಕೊಳ್ಳುತ್ತೇವೆಯೋ ಅಥವಾ ನಮ್ಮ ಅಹಂಕಾರ ಬುಸುಗುಟ್ಟುತ್ತದೆಯೋ? ನಮಗೆ ಕಷ್ಟ, ತೊಂದರೆ, ಅಸಹನೆಯಾದಾಗ ತಿತಿಕ್ಷೆ, ನಿರ್ಮತ್ಸರತೆಯಿಂದ

೨ ಶ್ರೀಮದ್ ಭಗವದ್ಗೀತಾ : ಸಾಧಕ ಸಂಜೀವಿನಿ - ಸ್ವಾಮಿ ರಾಮಸುಖ ದಾಸ, ಪು. ೧೦೭.

೩. Universal Message of Bhagavadgita, P. 192

೪. ಅಲ್ಲೇ.

ಗೊಣಗುಟ್ಟದೆ ಇರುತ್ತೇವೆಯೋ ? ಇಲ್ಲವೋ? ಈ ರೀತಿ ಇನ್ನೂ ಅನೇಕ ಪ್ರಶ್ನೆಗಳನ್ನು ಕೇಳಿದಾಗ ದಿನದಿನದ ಜೀವನದಲ್ಲಿ ಇನ್ನೂ ಅದೆಷ್ಟು refinement of our psychic energies-ಬುದ್ಧಿ ತತ್ತ್ವದ ಉದಾತ್ತೀಕರಣ ಆಗಬೇಕಾಗಿದೆ ಎಂಬದು ಗೊತ್ತಾಗುತ್ತದೆ. ಬುದ್ಧಿಯ training ಕರ್ಮಯೋಗದ ಒಂದು ಪ್ರಧಾನ ಅಂಗ.

ಕರ್ಮಯೋಗ ಅಭ್ಯಾಸದಿಂದ, ಚಾರಿತ್ರ್ಯ ನಿರ್ಮಾಣ ಕೃಷಿಯಲ್ಲಿ, ಆತ್ಮ ಸಾಕ್ಷಾತ್ಕಾರದ ಪ್ರಯತ್ನಮಾರ್ಗದಲ್ಲಿ ಇನ್ನೊಂದು ಪ್ರಯೋಜನವೂ ಇದೆ.

**ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।**
**ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥**

'ಈ ನಿಷ್ಕಾಮ ಕರ್ಮಯೋಗದಲ್ಲಿ ಪ್ರಾರಂಭಿಸಿದ ಕರ್ಮವು ನಾಶವಾಗುವುದಿಲ್ಲ. ಪ್ರಾರಂಭಿಸಿ ಬಿಟ್ಟಿದ್ದಕ್ಕೆ ಯಾವ ದೋಷವೂ ಉಂಟಾಗುವುದಿಲ್ಲ. ಈ ಕರ್ಮಯೋಗವೆಂಬ ಧರ್ಮದ ಸ್ವಲ್ಪ ಅನುಷ್ಠಾನವೂ ದೊಡ್ಡ ಭಯದಿಂದ ಪಾರು ಮಾಡುತ್ತದೆ.'

ನಾವು ರಸ್ತೆಯಲ್ಲಿ ನಡೆದು ಹೋಗುವಾಗ ಮಧ್ಯದಲ್ಲಿ ಆಯಾಸವಾದಾಗ ಒಂದಿಷ್ಟು ವಿಶ್ರಾಂತಿ ತೆಗೆದುಕೊಳ್ಳುತ್ತೇವೆ. ವಿಶ್ರಾಂತಿ ಮುಗಿದ ಮೇಲೆ ಮತ್ತೆ ಅಲ್ಲಿಂದಲೇ ಮುಂದುವರಿಯಬಹುದು. ಮೊದಲಿನಿಂದ ನಡೆದ ಬಂದ ದಾರಿಯನ್ನು ಮತ್ತೆ ನಡೆಯಬೇಕಾಗಿಲ್ಲ. ನಾವು ಮನೆ ಕಟ್ಟುವಾಗ ಹಣದ ಅಭಾವದಿಂದ ಬುನಾದಿ ಹಾಕಿ ಕೆಲಸ ನಿಲ್ಲಿಸುತ್ತೇವೆ. ಹಣ ಬಂದ ಮೇಲೆ ಮತ್ತೆ ಮೊದಲಿನಿಂದ ಕೆಲಸ ಆರಂಭಿಸಬೇಕಿಲ್ಲ, ಈಗ ನೇರವಾಗಿ ಗೋಡೆ ಕಟ್ಟಬಹುದು. ಮತ್ತೆ ಹಣ ಮುಗಿದ ಮೇಲೆ ಕೆಲಸ ನಿಲ್ಲಿಸಿದರೂ ಹಣ ಬರುತ್ತಲೇ ಛಾವಣಿ ಕೆಲಸಕ್ಕೆ ಕೈ ಹಾಕಬಹುದು. ಹೀಗೆಯೇ ಕರ್ಮಯೋಗ. ಚಾರಿತ್ರ್ಯ ನಿರ್ಮಾಣ ಕಾರ್ಯವೂ ನಾವು ಸ್ವಲ್ಪ ಮಾಡಿ ಕೈಬಿಟ್ಟರೂ ನಷ್ಟವಿಲ್ಲ. ಮತ್ತೆ ಕೈಗೆತ್ತಿಕೊಂಡರೂ ಎಲ್ಲಿ ನಿಲ್ಲಿಸಿದೆವೋ ಅಲ್ಲಿಂದಲೇ ಮುಂದುವರಿಸಬಹುದು. ಆದರೆ ಹೋಮ ಹವನಾದಿಗಳು ಹಾಗಲ್ಲ, ಮಧ್ಯದಲ್ಲಿ ನಿಲ್ಲಿಸಿದರೆ ನಮಗೆ ಫಲ ಸಿಗುವುದಿಲ್ಲ, ಮತ್ತೆ ಮಾಡ ಬೇಕಾದರೆ ಮೊದಲಿನಿಂದ ಪ್ರಾರಂಭಿಸಬೇಕು.

ಆಧ್ಯಾತ್ಮಿಕ ವಿಕಾಸದ ಹಾದಿ ಬಹು ಕಠಿಣವಾದುದು. ಪ್ರಚಂಡ ಪ್ರಯತ್ನ, ಪ್ರಚಂಡ ಉತ್ಸಾಹದ ಆವಶ್ಯಕತೆಯಿದೆ. ಆದ್ದರಿಂದ ಈ excuse ನೀಡಲಾಗಿದೆ. ಬಳಿಕ ಭಗವಂತ ನಮ್ಮ ಕಷ್ಟವನ್ನು ಅರ್ಥಮಾಡಿಕೊಂಡು ನಮಗೆ ಪ್ರೀತಿಬಲವನ್ನು ಪ್ರೋತ್ಸಾಹ, ಧೈರ್ಯ, ಭರವಸೆಯನ್ನು ತುಂಬಲು '**ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ।**' 'ನೀನು ಸ್ವಲ್ಪ ಅಭ್ಯಾಸವನ್ನು ಮಾಡಿದರೂ ಸಾಕು, ಅದು ನಿನ್ನನ್ನು ದೊಡ್ಡ ಭಯದಿಂದ ಪಾರುಮಾಡುತ್ತದೆ.' ಎನ್ನುತ್ತಾನೆ. ಒಬ್ಬ ರೋಗಿ ಡಾಕ್ಟರ್ ಹತ್ತಿರ ಹೋದನು. ಡಾಕ್ಟರ್ ಪರೀಕ್ಷೆ ಮಾಡಿ, ''ಅಪ್ಪಾ, ಕಾಯಿಲೆ ಗಂಭೀರವಾಗಿದೆ. ನೀನು ಪ್ರತಿ ದಿನ ಒಂದು ಲೀಟರ್ ಹಾಲನ್ನು ಕುಡಿಯಲೇಬೇಕು. ಇಲ್ಲದಿದ್ದರೆ ಕಾಯಿಲೆ ವಾಸಿಯಾಗುವುದಿಲ್ಲ'' ಎಂದು ಹೇಳಿದರು. ರೋಗಿ, ''ಸ್ವಾಮಿ, ನಾನು ಬಡವ. ನಾನು ದಿನವೂ ಒಂದು ಲೀಟರ್ ಹಾಲು ಕುಡಿಯುವುದು ಕನಸಿನ ಮಾತು'' ಎಂದು ತನ್ನ ಕಷ್ಟ ತೋಡಿಕೊಂಡನು. ಆಗ ಡಾಕ್ಟರ್, ''ನೀನು ಒಂದು ಲೀಟರ್ ಹಾಲು ಕುಡಿಯಲು ಆಗುವುದಿಲ್ಲವೆಂದು ಹಾಲು ಕುಡಿಯುವುದನ್ನೇ ನಿಲ್ಲಿಸಬೇಡ, ಅರ್ಧ ಲೀಟರ್ ಆದರೂ ಕುಡಿ, ಕಾಲು ಲೀಟರ್ ಆದರೂ ಕುಡಿ, ಕೊನೆಯ ಪಕ್ಷ ೨೦೦ ml ಆದರೂ ಕುಡಿ'' ಎಂದರು.[೪] ಹಾಗೆಯೇ ಭಗವಂತ ನಮಗೂ ಎಷ್ಟು ಸಾಧ್ಯವೋ ಅಷ್ಟು, ಸ್ವಲ್ಪ ಸ್ವಲ್ಪವಾದರೂ ಮಾಡು ಎಂದು ಕರೆಕೊಡುತ್ತ, 'ಸ್ವಲ್ಪ ಮಾಡಿದರೂ ಅದು ನಮ್ಮನ್ನು ದೊಡ್ಡದಾಗಿ ಕಾಪಾಡುತ್ತದೆ' ಎಂದು ಭರವಸೆ ತುಂಬುತ್ತಾನೆ. ಶ್ರೀರಾಮಕೃಷ್ಣರು ಇದನ್ನೇ ''ನಾವು ಭಗವಂತನ ಕಡೆ ಒಂದು ಹೆಜ್ಜೆ ಹಾಕಿದರೆ ಅವನು ಹತ್ತು ಹೆಜ್ಜೆ ನಮ್ಮ ಬಳಿ ಸಾರುತ್ತಾನೆ.'' ಎಂದಿರುವರು. ಶ್ರೀಮಾತೆಯವರು, ''ಯಾರು ಒಮ್ಮೆಯಾದರೂ ಶ್ರೀರಾಮಕೃಷ್ಣರನ್ನು ಹೃತ್ಪೂರ್ವಕವಾಗಿ ಕರೆದಿರುವರೋ, ಅವರನ್ನು ಕರೆದುಕೊಂಡು ಹೋಗಲು ಶ್ರೀರಾಮಕೃಷ್ಣರೇ ಬರುತ್ತಾರೆ'' ಎಂದಿರುವರು.

ನಮ್ಮ ಶಕ್ತಿ ಮಿತವಾದುದು, ಪೂರ್ವಸಂಸ್ಕಾರಗಳ ಎಳೆತ ಪ್ರಬಲವಾದುದು. ಆದರೂ ಹೃತ್ಪೂರ್ವಕವಾಗಿ ನಮ್ಮಿಂದ ಸಾಧ್ಯವಾದಷ್ಟು ನಿಷ್ಕಾಮ ಕರ್ಮಯೋಗವನ್ನು ಆಧ್ಯಾತ್ಮಿಕ ಸಾಧನೆಯನ್ನು ಮಾಡೋಣ. ಉಳಿದುದು ಅವನ ಕೆಲಸ. ❋

೪. ಅಲ್ಲೇ. ಪು.೧೬೯

## ಪ್ರಕೃತಿ-ಪುರುಷರ ಲೀಲೆ

ಋಷೀಕೇಶದ ಬಳಿ 'ದಶರಥ್ ಕೀ ದಂಡಾ' ಎಂಬ ಪರ್ವತವಿದೆ. ಅದು ಅತ್ಯಂತ ಕಡಿದಾದ ಶಿಲೆ; ಆದ್ದರಿಂದ ಆ ಹೆಸರು. ಸ್ವಾಮಿ ಅಖಂಡಾನಂದರು ಅಲ್ಲಿ ಮೂರು ದಿನಗಳನ್ನು ಕಳೆದರು. ಒಂದು ರಾತ್ರಿ ಅವರು ಗಾಢ ಧ್ಯಾನದಲ್ಲಿದ್ದಾಗ ಅವರಿಗೆ ಶ್ರೀರಾಮಕೃಷ್ಣರ ದರ್ಶನ ವಾಯಿತು. ಅವರು ಹೇಳಿದರು, ''ಇಲ್ಲಿ ಪ್ರಕೃತಿ-ಪುರು ಷರ ಲೀಲೆ ಆದಿ ಅಂತ್ಯಗಳಿಲ್ಲದೆ ನಡೆಯುತ್ತಿದೆ. ಹಿಮಾ ಲಯವೇ ಪುರುಷ. ಮರಗಿಡ, ಹಣ್ಣು, ಹೂವು ಇತ್ಯಾದಿ ಗಳೇ ಪ್ರಕೃತಿ. ಇದನ್ನೇ ಪುರುಷನ ಮೇಲೆ ನಿಂತು ಪ್ರಕೃತಿ ನಾಟ್ಯವಾಡುತ್ತಾಳೆ ಎಂದು ಹೇಳುವುದು.'' ಹೀಗೆಂದ ಅವರು ಕಾಳೀಕೀರ್ತನೆಯೊಂದನ್ನು ಹಾಡತೊಡಗಿದರು. ತಮ್ಮ ಹೆಗಲ ಮೇಲೆ ಕೈಯಿಟ್ಟು ಈ ಹಾಡನ್ನು ಹಾಡು ತ್ತಿದ್ದ ಶ್ರೀರಾಮಕೃಷ್ಣರ ಈ ದರ್ಶನ ಅಖಂಡಾನಂದರಿಗೆ